ಪ್ರಮಾಣ ವಚನ ಬೋಧಿಸಿದ ದಿನಾಂಕಃ **11.11.2024**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎಂ. ವಕೀಲರಿಂದ**

ನಾನು **5**ನೇ ತರಗತಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಇಂಗ್ಲೀಷ್‌ನಲ್ಲಿ ಆರ್ ಎಂದು ಇನಿಶಿಯಲ್ ಬರೆದು ಪದ್ಮ ಎಂದು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಪ್ರತಿವಾದಿಯರು ನಮ್ಮ ಸ್ವತ್ತಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ನಾವು ಈ ಕೇಸನ್ನು ಹಾಕಿದ್ದೇವೆ. ದಾವಾ ಆಸ್ತಿಯು ನಮ್ಮ ತಾತನ ತಾತನಿಗೆ **1951** ರಲ್ಲಿ ನ್ಯಾಯಾಲಯದ ಡಿಕ್ರಿ ಮೂಲಕ ಬಂದಿರುತ್ತದೆ. ಸದರಿ ದಾವೆಯಲ್ಲಿ ಯಾರು ಯಾರು ಪಕ್ಷಗಾರರಾಗಿದ್ದರು ಎಂದರೆ ಗೊತ್ತಿಲ್ಲ. ಡಿಕ್ರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನ್ಯಾಯಾಲಯದ ಡಿಕ್ರಿ ಮೂಲಕ ನನ್ನ ತಾತನಿಗೆ ಪೂರ್ವ – ಪಶ್ಚಿಮ – **42** ಅಡಿ**,** ಉತ್ತರ – ದಕ್ಷಿಣ – **41** ಅಡಿ ವಿಸ್ತೀರ್ಣದ ಜಾಗ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ಉತ್ತರದ ಕಡೆ **33** ಅಡಿ ಬರುತ್ತದೆ ಎಂದು ಹೇಳುತ್ತಾರೆ.

ನನ್ನ ತಾತನವರು ಮೇಲೆ ಹೇಳಿದ ಆಸ್ತಿಯನ್ನು ನನ್ನ ಗಂಡನಿಗೆ ದಾನಪತ್ರದ ಮೂಲಕ ಬರೆದುಕೊಟ್ಟಿರುತ್ತಾರೆ. ಸದರಿ ದಾನಪತ್ರದ ಆಧಾರದ ಮೇಲೆ ನನ್ನ ಗಂಡನ ಹೆಸರಿನಲ್ಲಿ ಪೂರ್ತಿ ಆಸ್ತಿಯ ಖಾತೆಯಾಗಿತ್ತು. ಖಾತೆ ಉತಾರ್ ನಲ್ಲಿ **42** ಇಂಟು **41** ವಿಸ್ತೀರ್ಣ ಎಂದು ನನ್ನ ಗಂಡನ ಹೆಸರಿನಲ್ಲಿ ನಮೂದಾಗಿದೆ. ನನ್ನ ಗಂಡನ ಹೆಸರಿನಲ್ಲಿರುವ ಖಾತೆಯಲ್ಲಿ ಮೀಟರ್ ಅಳತೆಯಲ್ಲಿ ವಿಸ್ತೀರ್ಣವನ್ನು ನಮೂದು ಮಾಡಲಾಗಿದೆ. ಎಷ್ಟು ಮೀಟರ್ ಎಂದರೆ ಗೊತ್ತಿಲ್ಲ. ನನ್ನ ಗಂಡನ ಹೆಸರಿನಲ್ಲಿ ನನ್ನ ತಾತ ದಾನಪತ್ರ ಬರೆದುಕೊಡುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಒಟ್ಟು **4** ಅಂಗಡಿಗಳು ಇದ್ದವು. ಅದರಲ್ಲಿ ಮೂರು ಅಂಗಡಿಗಳನ್ನು ನನ್ನ ಗಂಡನ ಹೆಸರಿಗೆ ಬರೆದಿದ್ದಾರೆ. ಒಂದು ಅಂಗಡಿ ಮತ್ತು ಒಂದು ಮನೆಯನ್ನು ನನ್ನ ತಾತ ಅವರ ಜೀವನ

ನಿರ್ವಹಣೆಗಾಗಿ ಉಳಿಸಿಕೊಂಡಿದ್ದರು. ದಾವಾ ಆಸ್ತಿಯಲ್ಲಿ ಅಂಗಡಿಯ ಹಿಂಭಾಗದಲ್ಲಿ ಎರಡು ಮನೆಗಳು ಹಾಗೂ ಇನ್ನೆರಡು ಮನೆಗಳು ನೆಲ ಅಂತಸ್ತು ಮತ್ತು **1**ನೇ ಅಂತಸ್ತಿನಲ್ಲಿ ಇದ್ದವು. ನನ್ನ ತಾತ ಉಳಿಸಿಕೊಂಡಿದ್ದ ಒಂದು ಮನೆ ಮತ್ತು ಒಂದು ಅಂಗಡಿಯ ವಿಸ್ತೀರ್ಣ ಗೊತ್ತು. ಅಂಗಡಿಯ ಉದ್ದ **20** ಅಡಿ, ಅಗಲ **12** ಅಡಿಗಳು ಇರುತ್ತದೆ. ಸದರಿ ಅಂಗಡಿಯನ್ನು ನನ್ನ ತಾತನವರು **1**ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. ಸದರಿ ಕ್ರಯಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಗೆ ನಿ.ಪಿ.**2** ಕ್ರಯಪತ್ರವನ್ನು ತೋರಿಸಿದಾಗ ಅದಕ್ಕೆ ನಾನು, ನನ್ನ ಗಂಡ, ನನ್ನ ತಾಯಿ – ಅರಸಮ್ಮ, ಅಜ್ಜಿ – ವೆಂಕಟಮ್ಮ ಮತ್ತು ಅಜ್ಜ – ದಾಸಪ್ಪನವರ ಸಹಿಯನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ನಿ.ಪಿ.**2** ರಲ್ಲಿರುವ ಸಾಕ್ಷಿಯ ಭಾವನ ಹೆಂಡತಿ – ಗಾಯತ್ರಮ್ಮ ಮತ್ತು ಅವರ ಮಕ್ಕಳ ಸಹಿಯನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿಯವರೆಲ್ಲಾ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿ ಫೋಟೋ ತೆಗೆಸಿಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು **1**ನೇ ಪ್ರತಿವಾದಿಯು ಅಂಗಡಿಯನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿ ನಮ್ಮನ್ನು ಸಾಕ್ಷಿಯಾಗಿ ಸಹಿ ಬೇಕೆಂದು ಕರೆದುಕೊಂಡು ಹೋಗಿ ಕ್ರಯಪತ್ರಕ್ಕೆ ಸಹಿ ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ನಿ.ಪಿ.**2**ಕ್ಕೆ ನನ್ನ ಗಂಡ ನನ್ನ ಮಕ್ಕಳ ಪರವಾಗಿ ಗಾರ್ಡಿಯನ್ ಆಗಿ ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪತ್ರದಲ್ಲಿ ಏನು ಬರೆದಿದೆ ಎಂದು ಓದಿಲ್ಲ ಎಂದು ಹೇಳುತ್ತಾರೆ.

ನನಗೆ ಕನ್ನಡ ಸುಲಭವಾಗಿರುವ ಪದಗಳು ಓದಲು ಬರುತ್ತದೆ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನಾನು ಒಟ್ಟು ಎರಡು ಸಹಿಗಳನ್ನು ಮಾಡಿರುತ್ತೇನೆ. ಸಾಕ್ಷಿಯು ನಿ.ಪಿ.**2** ರಲ್ಲಿ ಪ್ರತಿ ಪುಟದಲ್ಲಿರುವ ಒಟ್ಟು **6** ತಮ್ಮ ಸಹಿಗಳನ್ನು ನೋಡಿ ಒಪ್ಪಿಕೊಂಡಿರುತ್ತಾರೆ.ಈ ದಾವೆ ಹಾಕುವ ಪೂರ್ವದಲ್ಲಿ ನನ್ನ ಗಂಡ ಅಸಲು ದಾವೆ ಸಂಖ್ಯೆ:**301/2010** ರಲ್ಲಿ ಇದೇ ಪ್ರತಿವಾದಿಗಳ ವಿರುದ್ಧ ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ ಸರಿ. ಅದೇ ರೀತಿ ನನ್ನ ತಾಯಿ ಅರಸಮ್ಮನವರು ಅಸಲು ದಾವೆ ಸಂಖ್ಯೆ:**99/2010** ರಲ್ಲಿ ಇದೇ ಪ್ರತಿವಾದಿಗಳ ವಿರುದ್ಧ

ಇನ್ನೊಂದು ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಈ ದಾವೆ ಹಾಕುವ ಮೊದಲು ನನ್ನ ಗಂಡ ಅಸಲು ದಾವೆ ಸಂಖ್ಯೆ:**301/2010** ರ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಗಂಡನವರು ನನ್ನ ತಾತ ಉಳಿಸಿಕೊಂಡಿರುವ ಸ್ವತ್ತು ಹಾಗೂ **1**ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ಸೇರಿಸಿ ಅದಕ್ಕೆ ತಾನೇ ಸಂಪೂರ್ಣ ಮಾಲೀಕನೆಂದು ಘೋಷಿಸಲು ದಾವೆ ಹಾಕಿದ್ದರು ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ:**301/2010** ರ ದಾವಾ ಪತ್ರದ ಬಗ್ಗೆ ತಿಳಿದುಕೊಂಡಿದ್ದೇನೆ. ಸದರಿ ದಾವೆಯಲ್ಲಿ ಎಲ್ಲಿಯೂ ಕೂಡ **1**ನೇ ಪ್ರತಿವಾದಿಗೆ ಮಾರಾಟ ಮಾಡಿರುವ ಆಸ್ತಿಯ ಬಗ್ಗೆ ನಮೂದಾಗಿಲ್ಲ ಎಂದರೆ ಗೊತ್ತಿಲ್ಲ. ಸದರಿ ದಾವೆ ಸಲ್ಲಿಸುವಾಗ ನಿ.ಪಿ.**2** ಕ್ರಯಪತ್ರವಾಗಿತ್ತು. ನನ್ನ ಭಾವನ ಹೆಂಡತಿ ಮತ್ತು ಮಕ್ಕಳು **1**ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಸ್ತೀರ್ಣವನ್ನು ಹೊರತುಪಡಿಸಿ ಉಳಿದ ಆಸ್ತಿಯಲ್ಲಿ ಹಿಸ್ಸೆಬೇಕೆಂದು ಅಸಲು ದಾವಾ ಸಂಖ್ಯೆ:**430/2013** ರಲ್ಲಿ ದಾವೆ ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಗಂಡ ಮೃತಪಟ್ಟ ನಂತರ ನಾವು ನ್ಯಾಯಾಲಯಕ್ಕೆ ಹಾಜರಾಗಿ ಕೇಸು ನಡೆಸುತ್ತಿದ್ದೇವೆ ಎಂದರೆ ಗೊತ್ತಿಲ್ಲ. ನಾನು ನನ್ನ ತಾಯಿ ಜೊತೆಗೆ ಚೆನ್ನಾಗಿದ್ದೇನೆ. ನನ್ನ ತಾಯಿ ಈ ಕೇಸಿನಲ್ಲಿ ಸರಿಯಾಗಿ ವಿಚಾರಣೆ ನೀಡಲು ಆಗದೇ ಇದ್ದ ಕಾರಣ ನಾನು ವಿಚಾರಣೆ ನೀಡುತ್ತಿದ್ದೇನೆ ಎಂದರೆ ಸರಿ.

ನಾನು ನನ್ನ ಗಂಡನ ಹೆಸರಿಗೆ **2002** ರಲ್ಲಿ ಬರೆದುಕೊಟ್ಟ ದಾನಪತ್ರ ಮತ್ತು ಒಂದು ಅಂಗಡಿ ಮತ್ತು ಮನೆಯನ್ನು ತಾತ ಉಳಿಸಿಕೊಂಡಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹೌದು. ದಾಸಪ್ಪನು ಅರಸಮ್ಮನಿಗೆ ಒಂದು ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾತ**,** ನನ್ನ ತಾಯಿ ಎಲ್ಲಾ ಸೇರಿ **2**ನೇ ಪ್ರತಿವಾದಿಗೆ ನೋಂದಾಯಿತ ಹಕ್ಕು ನಿವೃತ್ತಿ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನನ್ನ ತಾತನವರು ನನ್ನ ತಾಯಿಗೆ ಎಷ್ಟು ವಿಸ್ತೀರ್ಣಕ್ಕೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಹಕ್ಕು ನಿವೃತ್ತಿ ಪತ್ರದ ಪ್ರಕಾರ **2**ನೇ ಪ್ರತಿವಾದಿಗೆ ಎಷ್ಟು ವಿಸ್ತೀರ್ಣ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ:**430/2013** ರಲ್ಲಿ **2**ನೇ ಪ್ರತಿವಾದಿ ಹಾಗೂ ಅವರ

ಮಕ್ಕಳು, ವಾದಿಯರು 1ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಪೈಕಿ 12.5 ಅಡಿ, ಪೂರ್ವ – ಪಶ್ಚಿಮ ಉತ್ತರದ ಅಭಿಮುಖವಾಗಿ 11.5 ಅಡಿ, ದಕ್ಷಿಣವಾಗಿ 41.5 ಅಡಿ ವಿಸ್ತೀರ್ಣವನ್ನು ಈ ಕೇಸಿನ 1ನೇ ಪ್ರತಿವಾದಿಗೆ ಮಾರಾಟ ಮಾಡಿದ ಬಗ್ಗೆ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ಗೊತ್ತಿಲ್ಲ. 1ನೇ ಪ್ರತಿವಾದಿ ಮಾರಾಟ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಉಳಿಕೆ ವಿಸ್ತೀರ್ಣದಲ್ಲಿ ನಾನು ಮತ್ತು ಮತ್ತು ನನ್ನ ತಾಯಿ 2ನೇ ಪ್ರತಿವಾದಿಗೆ ಇದುವರೆಗೂ ಭಾಗ ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ. ಈ ಕೇಸಿನಲ್ಲಿ 2ನೇ ಪ್ರತಿವಾದಿಗಳ ಮಕ್ಕಳನ್ನು ಸೇರಿಸಿದ್ದೀರಾ ಎಂದರೆ ಗೊತ್ತಿಲ್ಲ. ನಿ.ಪಿ.2ಕ್ಕೆ ನಮಗೆ ಮಾರಾಟಗಾರರು ಎಂದು ಹೇಳಿ ಸಹಿ ಪಡೆದುಕೊಂಡಿಲ್ಲ, ಆದರೆ ಅಂಗಡಿ ಕೊಡುವುದಕ್ಕೆ ಸಾಕ್ಷಿಯಾಗಿ ಸಹಿ ಮಾಡಿಸಿಕೊಂಡಿರುತ್ತಾರೆ. ನಿ.ಪಿ.2ಕ್ಕೆ ಪ್ರತಿ ಪುಟಕ್ಕೆ ಸಹಿ ಮಾಡುವಾಗ ಹಾಗೂ ಫೋಟೋ ಪಕ್ಕದಲ್ಲಿ ಸಹಿ ಮಾಡುವಾಗ ಯಾವ ಕಾರಣಕ್ಕಾಗಿ ಈ ಸಹಿಗಳನ್ನು ಪಡೆದುಕೊಳ್ಳುತ್ತಿದ್ದೀರಾ ಎಂದು ತಕರಾರು ಮಾಡಿಲ್ಲ. ವಾದಿಯರು ಯಾರೂ ಕೂಡ ಪತ್ರವನ್ನು ಓದಿಸಿ ತಿಳಿದುಕೊಂಡಿರುವುದಿಲ್ಲ. ಆ ದಿನ ಪತ್ರವನ್ನು ಓದಿಸಿ ತಿಳಿದುಕೊಂಡು ಸಹಿ ಮಾಡುವುದಕ್ಕೆ ವಾದಿಯರಿಗೆಲ್ಲಾ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯ ಗಂಡನಿಗೆ ಕೇಳಿರುತ್ತೇನೆ ಹಾಗೂ ಸಹಿ ಪಡೆಯುತ್ತಿದ್ದ ಅಧಿಕಾರಿಗಳನ್ನು ಸಹ ಕೇಳಿರುತ್ತೇವೆ ಆದರೆ ಅವರು ಸಮಯವಾಗಿದೆ ಕಂಪ್ಯೂಟರ್ ಲಾಕ್ ಆಗುತ್ತದೆ ಎಂದು ಹೇಳಿ ನಮಗೆ ಪತ್ರವನ್ನು ಓದಿ ತಿಳಿಸಿರುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯಿಂದ ಸಬ್ ರಿಜಿಸ್ಟ್ರಾರ್ ಕಛೇರಿಗೆ ಸುಮಾರು 1 ಕಿ.ಮೀ. ದೂರವಾಗುತ್ತದೆ. ಆ ದಿನ ನಾವು ಸಬ್ ರಿಜಿಸ್ಟ್ರಾರ್ ಕಛೇರಿಗೆ ಮಧ್ಯಾಹ್ನ 1.00 ಗಂಟೆಗೆ ಹೋಗಿರುತ್ತೇವೆ. ನಿ.ಪಿ.2 ಕ್ಕೆ ಎಷ್ಟು ಗಂಟೆಗೆ ಸಹಿ ಮಾಡಿದ್ದೇವೆ ಎಂದು ಗೊತ್ತಿಲ್ಲ. ಅದೇ ರೀತಿ ಕ್ರಯಪತ್ರವವು ಎಷ್ಟು ಗಂಟೆಗೆ ನೋಂದಣಿಯಾಗಿದೆ ಎಂದರೆ ಗೊತ್ತಿಲ್ಲ. ಸುಮಾರು 2 ಗಂಟೆಗಳ ಕಾಲ ನಾವು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಇದ್ದೆವು. ಆ ಕಛೇರಿಗೆ 1.30 ಗಂಟೆಗೆ ಊಟದ ವಿರಾಮ ಇರುತ್ತದೆ ಎಂದರೆ ಗೊತ್ತಿಲ್ಲ. ಕ್ರಯಪತ್ರವು 12.58.29 ಸೆಕೆಂಡ್ಸ್ ಸಮಯದಲ್ಲಿ ನೋಂದಣಿಯಾಗಿದೆ ಎಂದರೆ ಗೊತ್ತಿಲ್ಲ. ಆಗ ಸಂಜೆಯಾಗಿರಲಿಲ್ಲ ಎಂದರೆ ಸರಿ. ಆ ದಿನ ಸಂಜೆಯ ಒಳಗಡೆ

ನಾನಾಗಲೀ, ನನ್ನ ಗಂಡನಾಗಲೀ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿ ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ಕೇಳಿ ತಿಳಿದುಕೊಳ್ಳಲು ಪ್ರಯತ್ನಪಟ್ಟಿರುವುದಿಲ್ಲ. ನಿ.ಪಿ.**2** ರ ಚಕ್ಕುಬಂಧಿಯನ್ನು ಸಾಕ್ಷಿಗೆ ಓದಿ ಹೇಳಿದಾಗ ಪೂರ್ವದ ಚಕ್ಕುಬಂಧಿ ತಪ್ಪಾಗಿದೆ ಹಾಗೂ ಪಶ್ಚಿಮ ಮತ್ತು ಉತ್ತರಕ್ಕೆ ನಮೂದಿಸಿರುವ ಚಕ್ಕುಬಂಧಿ ಸರಿ ಇದೆ, ದಕ್ಷಿಣಕ್ಕೆ – ಗಲ್ಲಿ ಇದೆ ಎಂದರೆ ಸರಿಯಲ್ಲ. ಆದರೆ ನಾಗರಾಜ್‌ನ ಮನೆ ಇದೆ. ನಿ.ಪಿ.**2** ಪತ್ರವನ್ನು ಇಲ್ಲಿಯ ತನಕ ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ.

**ಮುಂದುವರೆದ ವಾಟೀ ಸವಾಲುಃ ಕೋರಿಕೆಯ ಮೇರೆಗೆ ಮೂಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.